ಶ್ರೀರಾಮ್ ವಿದ್ಯಾರ್ಥಿಯಾಗಿದ್ದಾಗಲೂ, ನಂತರವೂ ತೇಜಸ್ವಿಯವರೊಂದಿಗೆ ಪತ್ರ ವ್ಯವಹಾರವೇ ಮುಖ್ಯ ಸಂಪರ್ಕ ಸಾಧನವಾಗಿತ್ತು. ಅಂದಿನ ದಿನಗಳಲ್ಲಿ ತೇಜಸ್ವಿಯವರಿಂದ ಬರುತ್ತಿದ್ದ ಕಾಗದಗಳಲ್ಲಿ ಬರವಣಿಗೆಯೊಂದಿಗೆ ರೇಖಾಚಿತ್ರಗಳೂ ಇರುತ್ತಿದ್ದವು! ಅವರ ಸ್ಕೂಟರಿನ ಯಾವುದಾದರೂ ಭಾಗಗಳು ಬೇಕಾದರೆ ಅವುಗಳ ಚಿತ್ರ ಮತ್ತು ಪತ್ರದಲ್ಲಿ ಹೇಳಿದ ಸಮಯಕ್ಕೆ ಬರದಿದ್ದರೆ ಏನಾಗುತ್ತದೆ ಗೊತ್ತೊ ಎಂಬ ಬೆದರಿಕೆ ಬೇರೆ ಇರುತ್ತಿತ್ತು! ಆ ದಿನಗಳಲ್ಲಿ ತೇಜಸ್ವಿ ಜಲ್ಲಿ ಹಾಳೆಯಂತಹ ತೆಳು ಕಾಗದದ ಮೇಲೆ ಕತೆಗಳನ್ನು ಬರೆದು ಗೆಳೆಯ ಶ್ರೀರಾಮರಿಗೆ ಕಳಿಸುತ್ತಿದ್ದರು. ಶ್ರೀರಾಮ್ ಅದನ್ನು ಪ್ರತಿಮಾಡಿ ಪತ್ರಿಕೆಗಳಿಗೆ ಕಳಿಸಬೇಕಿತ್ತು. ಒಂದು ಸಲ ಹೀಗೆಯೇ 'ಅವನತಿ' ಎನ್ನುವ ಕತೆ ಮೂಡಿಗೆರೆಯಿಂದ ಬಂದಿತು. ಅದರೊಡನಿದ್ದ ಪತ್ರದಲ್ಲಿ, 'ರೀ ಕತೆ ದೊಡ್ಡದಾಗಿದೆ. ಸ್ವಲ್ಪ ಸಣ್ಣ ಅಕ್ಷರಗಳಲ್ಲಿ ಬರೆದು ಪ್ರಜಾವಾಣಿಗೆ ಕಳಿಸಿ. ಪದ್ಮಾ ಮತ್ತು ರಾಮದಾಸ್ ಕಾಪಿ ಮಾಡಕೂಡದು' ಎಂದಿತ್ತು! 'ಏಕೆ, ನಾವೇನು ಕತೆಯನ್ನು ತಿರುಚಿ ಬಿಡುತ್ತೇವೆಯೆ?' ಎಂದು ಆಗ ನಾನು ಚುಡಾಯಿಸಿದ್ದೆ!

ಮುಂದೆ 'ಲಂಕೇಶ್ ಪತ್ರಿಕೆ'ಗೆ ತೇಜಸ್ವಿ ಬರೆಯುತ್ತಿದ್ದ ದಿನಗಳಲ್ಲಿ ಒಂದು ಲೇಖನ ಮತ್ತು ಪತ್ರ ಅವರಿಂದ ಬಂದಿತು. ನಮ್ಮವರು ಓದು ಎಂದು ಪತ್ರವನ್ನು ಕೊಟ್ಟರು. ಓದಿದ ಮೇಲೆ ಏನ್ಮಾಡೋಣ ಎಂಬ ಪ್ರಶ್ನೆ. ಮಾಡೋದೇನು? ಕಳಿಸಿ ಪತ್ರಿಕೆಗೆ ಎಂದೆ. ಪತ್ರದಲ್ಲಿ ಏನಿತ್ತು? ಲೇಖನದೊಂದಿಗೆ ಬಂದ ಪತ್ರದಲ್ಲಿ, 'ಶ್ರೀರಾಮ್‌ಗೆ, ನೀವು ಒಂದು ಕಾಲೇಜಿನಲ್ಲಿ ಗೌರವಾನ್ವಿತ ಪ್ರೊಫೆಸರ್. ನಾನು ಬರೆದಿರುವುದು ನಿಮಗೆ ಸಮ್ಮತವೆನಿಸಿದರೆ ಲಂಕೇಶ್ ಪತ್ರಿಕೆಗೆ ಕಳಿಸಿ. ಬೇಡ ಎನಿಸಿದರೆ ಹರಿದು ಹಾಕಿ' ಎಂದಿತ್ತು. 'ಲಂಕೇಶ್ ಪತ್ರಿಕೆ'ಯಲ್ಲಿ ಪ್ರಕಟವಾದ 'ಕವಿಯೊಡನೆ ಒಂದು ದಿನ' ಎಂಬ ಶೀರ್ಷಿಕೆಯ ಆ ಲೇಖನ ಅಂದಿನಿಂದ ಇಂದಿನವರೆಗೆ ಓದುಗರಿಗೆ ಒಂದು ಅದ್ಭುತ ಅಚ್ಚರಿಯೇ ಆಗಿದೆ. 'ಪುಸ್ತಕ ಪ್ರಕಾಶನ'ದ ಮೊದಲ ಪ್ರಕಟಣೆಯಾದ 'ಪರಿಸರದ ಕತೆ' ಕೃತಿಯ ಮೊದಲ ಪ್ರಸಂಗವಾಗಿದೆ. ಇಂದಿಗೂ ಓದುಗರು ಅಚ್ಚರಿಯಿಂದ 'ನೀವೇನಾ ಆ ಶ್ರೀರಾಮ್?' ಎಂದು ಕೇಳುತ್ತಾರೆ!

ಮುಂದೆ ಕೆಲವು ಘಟನೆಗಳಿಂದ ತೇಜಸ್ವಿಯವರ ವಿಚಾರ, ಸ್ವಭಾವಗಳನ್ನು ನನ್ನ ಗ್ರಹಿಕೆಗೆ ದಕ್ಕಿದಷ್ಟು ದಾಖಲಿಸುತ್ತೇನೆ. ತೇಜಸ್ವಿಯವರು ಒಬ್ಬ ಪ್ರತಿಭಾವಂತ ಲೇಖಕನಾಗಿ, ಛಾಯಾಚಿತ್ರಕಾರನಾಗಿ ಕಂಡು ಬರುತ್ತಿದ್ದುದು ಸಾಮಾನ್ಯ. ಆದರೆ, ದೈನಂದಿನ ಕೆಲಸಗಳಲ್ಲಿ, ಮಾತುಕತೆಗಳಲ್ಲಿ ಕಂಡು ಬರುತ್ತಿದ್ದುದು ತೇಜಸ್ವಿಯವರ ಸ್ವಾರಸ್ಯಕರ ಹಾಗೂ ಹೀಗೇ ಎಂದು ಹೇಳಲಾಗದ ವ್ಯಕ್ತಿತ್ವ. ತೇಜಸ್ವಿಯವರ ಪ್ರಮುಖ ಗುಣಗಳಾದ ಕುತೂಹಲ, ನಾಚಿಕೆ, ಸಂಕೋಚ ಎಷ್ಟರ ಮಟ್ಟಿಗೆ ಅಂದರೆ ಇವರು ಅಹಂಕಾರಿಯೇನೊ ಎಂದು ಅನ್ನಿಸುವಷ್ಟರ ಮಟ್ಟಿಗೆ. ಸ್ನೇಹಿತರೆಲ್ಲಾ ಸೇರಿದಾಗ ಬೇರೆಯವರ ಮಾತನ್ನು ಕುತೂಹಲದಿಂದ ಕೇಳಿಸಿಕೊಂಡು ತಮಗೆ ಗೊತ್ತಿಲ್ಲದ ವಿಷಯಗಳನ್ನು ಮುಕ್ತ ಮನಸ್ಸಿನಿಂದ ತಿಳಿದುಕೊಳ್ಳುತ್ತಿದ್ದರು. ತಾನೇ ತಿಳಿದವನೆಂಬ ಗರ್ವ ಅವರಿಗಿರಲಿಲ್ಲ. ನಮ್ಮ ಮಾತಿಗೆ ಅರ್ಥ ಕೊಡುವುದು ನಮ್ಮ ಬದುಕೇ ಹೊರತು ಡಿಕ್ಷನರಿಗಳಲ್ಲ ಎಂದು ತೇಜಸ್ವಿ ಹೇಳುತ್ತಿದ್ದರು. ಒಮ್ಮೆ ಅವರ 'ಮಿಸ್ಸಿಂಗ್ ಲಿಂಕ್' ಪುಸ್ತಕದ ಬಗ್ಗೆ ಮಾತಾಡುತ್ತಿದ್ದಾಗ ತೇಜಸ್ವಿ, 'ಪದ್ಮಾ ನೀವೇ ಇದನ್ನು ಬರೀಬಹುದಾಗಿತ್ತು ಕಣ್ರೀ' ಎಂದಾಗ ನಾನು ಬೆರಗಾದೆ. ವಿಜ್ಞಾನದ ವಿದ್ಯಾರ್ಥಿಗಳು 'ಪೆಲಿಯಂಟಾಲಜಿ' ಎಂದು, ಕಲಾ ವಿದ್ಯಾರ್ಥಿಗಳು 'ಅಂತ್ರೊಪಾಲಜಿ' ಎಂದು ಓದುವ ಮಾನವ ವಿಕಾಸದ ಎಲ್ಲ ವಿಷಯಗಳು ನನಗೂ ಗೊತ್ತಿದ್ದವು. ಆದರೆ, ಅದಕ್ಕೆ ಸ್ವಾರಸ್ಯಕರ ಕಥೆಯ ಸ್ವರೂಪ ಕೊಡುವ ಪ್ರತಿಭೆ? ಹಲವು ಪ್ರಾಧ್ಯಾಪಕರು ನಾವೂ ಇಂಥ ಕೃತಿ ಬರೀಬೇಕಿತ್ತು, ಹೊಳೆಯಲಿಲ್ಲವಲ್ಲಾ ಎಂದು ಪೇಚಾಡಿಕೊಂಡಿದ್ದರು. ಮಿಲನಿಯಂ ಸರಣಿಯನ್ನು ತೇಜಸ್ವಿಯವರು ಬರೆದು ಆ ಪುಸ್ತಕಗಳ ಪ್ರೂಫ್ ನೋಡುವಾಗ ಪಾರಿಭಾಷಿಕ ಶಬ್ದಗಳನ್ನು ತಿದ್ದುವ ಸಂದರ್ಭದಲ್ಲಿ, 'ನನ್ನ ಏನ್ ಕೇಳ್ತೀರಾ. ನಿಮ್ಮಷ್ಟಕ್ಕೆ ನೀವು ತಿದ್ದಿ' ಎಂದು ನಮಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರು.